


ಎನ್‌ಐಟಿಕೆ ಫಿಸಿಯೋಥೆರಪಿ ವಿಭಾಗಕ್ಕೆ ಉಪಕರಣಗಳನ್ನು ಹಸ್ತಾಂತರಿಸಲಾಯಿತು

# ಎನ್‌ಐಟಿಕೆಗೆ ಉಪಕರಣ ಹಸ್ತಾಂತರ

ಪ್ರಜಾವಾಣಿ ವಾರ್ತೆ

ಮಂಗಳೂರು: ಕೇಂದ್ರ ರಕ್ಷಣಾ ಸಚಿವಾಲಯದ ಅಡಿಯಲ್ಲಿ ಬರುವ ನವರತ್ನ ಪಿಎಸ್‌ಯು ಬೆಂಗಳೂರಿನ ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ತನ್ನ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಚಟುವಟಿಕೆ ಭಾಗವಾಗಿ ಸುರತ್ಕಲ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ (ಎನ್‌ಐಟಿಕೆ) ಆರೋಗ್ಯ ಕೇಂದ್ರಕ್ಕೆ ವೈದ್ಯಕೀಯ ಮತ್ತು ಫಿಸಿಯೋಥೆರಪಿ ಉಪಕರಣಗಳನ್ನು ನೀಡಿದೆ.

ಸುಮಾರು ₹10 ಲಕ್ಷ ಮೌಲ್ಯದ ಈ ಉಪಕರಣಗಳಲ್ಲಿ ಇಸಿಜಿ ಯಂತ್ರ, ಥೈರಾಯ್ಡ್ ಫಂಕ್ಷನ್ ಟೆಸ್ಟ್ ಅನಲೈಸರ್ ಮತ್ತು ಫಿಸಿಯೋಥೆರಪಿ ಉಪಕರಣಗಳು ಸೇರಿವೆ. ಇವುಗಳ ಹಸ್ತಾಂತರ ಕಾರ್ಯಕ್ರಮವು ಈಚೆಗೆ ಎನ್‌ಐಟಿಕೆಯಲ್ಲಿ ನಡೆಯಿತು. ಎನ್‌ಐಟಿಕೆ 1986 ಬ್ಯಾಚ್‌ನ ವಿದ್ಯಾರ್ಥಿಯಾಗಿರುವ ಐಎಎಸ್ ಅಧಿಕಾರಿ ಶ್ರೀಕಾಂತ್ ವಾಲ್ಗಡ್ ಮುಖ್ಯ ಅತಿಥಿಯಾಗಿದ್ದರು. ಎನ್‌ಐಟಿಕೆ ನಿರ್ದೇಶಕ ಪ್ರೊ. ಬಿ. ರವಿ ಅಧ್ಯಕ್ಷತೆ ವಹಿಸಿದ್ದರು.

ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್‌ನ ಪರಿಸರ ಮತ್ತು ಕಾರ್ಪೊರೇಟ್ ಜವಾಬ್ದಾರಿಯ ಡಿಜಿಎಂ ಶಶಿಭೂಷಣ ಎಚ್.ಎಸ್, ಸಿ.ಎಸ್.ಆರ್.ನ ಹಿರಿಯ ಎಂಜಿನಿಯರ್ ರವಿಕಾಂತ್ ನಾಯಕ್, ಎನ್‌ಐಟಿಕೆಯ ಪ್ರೊ.ಶ್ರೀಕಂಠ ಎಸ್. ರಾವ್, ಸೌಮ್ಯ ಹೆಗ್ಡೆ, ಬಾಲಭಾಸ್ಕರ್ ಇದ್ದರು.

Prajavani, Date:02/02/24, p, no -02